| | | |
|---|---|---|
| ಓ ಎಸ್ | 79/2013 | ಪಿ.ಡಬ್ಲ್ಯೂ: 1 |

ಇಂದು ದಿಃ 24.07.2023 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀ ಎಂ ಸಿ ಡಿ ಕೆ ವಕೀಲರಿಂದಃ-

ನಾನು ಎಸ್ ಎಸ್ ಎಲ್ ಸಿ ಅನುತ್ತೀರ್ಣಳಾಗಿದ್ದೇನೆ. ಒಂದರಿಂದ ನಾಲ್ಕು ಈ ದಾವೆಯಲ್ಲಿ ಸಲ್ಲಿಸಿದ ತಕರಾರನ್ನು ನಾನು ಓದಿಲ್ಲ. ನಮ್ಮ ವಕೀಲರ ಬಳಿ ಸದರಿ ತಕರಾರಿನ ಬಗ್ಗೆ ಕೇಳಿ ತಿಳಿದುಕೊಂಡಿಲ್ಲ. ಒಂದರಿಂದ ನಾಲ್ಕು ಈ ದಾವೆಯಲ್ಲಿ ಸಲ್ಲಿಸಿದ ತಕರಾರಿನ ಅಂಶಗಳ ಬಗ್ಗೆ ಗೊತ್ತಿದ್ದರೂ ನನ್ನ ಹೊಣೆಗಾರಿಕೆ ತಪ್ಪಿ ಸಿಕೊಳ್ಳಲು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ 37 ರಿಂದ 47 ದಾಖಲೆಗಳನ್ನು ನಾನು ಮೊದಲ ಬಾರಿಗೆ ಮುಖ್ಯವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದಾಗ ಹಾಜರು ಮಾಡಲು ತೊಂದರೆ ಇರಲಿಲ್ಲ. ಸದರಿ ದಾಖಲೆಗಳು ಆ ಸಮಯದಲ್ಲಿ ನನ್ನ ಬಳಿ ಇರಲೇ ಇಲ್ಲ ಎಂದರೆ ಇತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ದಾಖಲೆಗಳನ್ನು ಇತ್ತೀಚೆಗೆ ಸೃಷ್ಟಿಸಿ ಹಾಜರು ಮಾಡಿದ್ದೇನೆ ಎಂದರೆ ಸುಳ್ಳು. ನೀಲಕಂಠದೇವರಿಗೂ ವಾದಿಗಳಿಗೂ ಇಲ್ಲದೇ ಇರುವ ಸಂಬಂಧದ ಸಮರ್ಥನೆಗಾಗಿ ನಾನು ನಿ ಪಿ 37 ರಿಂದ 47 ದಾಖಲೆಗಳನ್ನು ಸೃಷ್ಟಿಸಿ ಹಾಜರು ಮಾಡಿದ್ದೇನೆ ಎಂದರೆ ಸುಳ್ಳು.

ಉಳಿದಂತೆ ಈ ದಾಖಲೆಗಳ ಬಗ್ಗೆ 1 ರಿಂದ 4 ಪ್ರತಿವಾದಿಗಳ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆಃಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.